154 (240) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಕಾಯ್ದಿರಿಸುವ ಅನುದಾನವೆಷ್ಟು ಈವರೆಗೆ ಬಿಡುಗಡೆಗೊಳಿಸಿರುವ ಅನುದಾನ ಎಷ್ಟು, ಬಿಡುಗಡೆ ಆಗದೇ ಉಳಿದಿರುವುದೆಷ್ಟು (ವಿವರ ನೀಡುವುದು) ,

ಆ) ಮುಜರಾಯಿ ಇಲಾಖೆಯಿಂದ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಸರ್ಕಾರ ಬಿಡುಗಡೆಗೊಳಿಸಿರುವ ಅನುದಾನವೆಷ್ಟು ಹಾಗೂ ಷರತ್ತುಗಳೇನು ,

ಇ) ಶಿಗ್ಗಾಂವ–ಸವಣೂರು ತಾಲ್ಲೂಕುಗಳಲ್ಲಿಯ ಎಷ್ಟು ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಲು ಸರ್ಕಾರ ಕ್ರಮ ತೆಗೆದುಕೊಂಡಿದೆ (ವಿವರ ನೀಡುವುದು) ,

ಈ) ಹಾಗಿಲ್ಲದಿದ್ದಲ್ಲಿ, ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಯಾವಾಗ ಅನುದಾನ ಬಿಡುಗಡೆಗೊಳಿಸಲಾಗುವುದು ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) 2006–07ನೇ ಸಾಲಿನ ಆಯ–ವ್ಯಯದಲ್ಲಿ ರೂ 698 85 ಲಕ್ಷಗಳನ್ನು ಕಾಯ್ದಿರಿಸಿದೆ ಈ ಹಣದಲ್ಲಿ ಇಲ್ಲಿಯವರೆಗೆ ರೂ 463 55 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ ಬಾಕಿ ರೂ 235 30 ಲಕ್ಷಗಳು ಬಿಡುಗಡೆ ಆಗಬೇಕಾಗಿದೆ

ಆ) 2006–07ನೇ ಸಾಲಿನಲ್ಲಿ ಈವರೆವಿಗೆ 1060 ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಸರ್ಕಾರವು ರೂ 463 55 ಲಕ್ಷಗಳನ್ನು ಮಂಜೂರು ಮಾಡಿರುತ್ತದೆ ಸರ್ಕಾರವು ದಿ 28–1–2000 ರಂದು ಹೊರಡಿಸಿರುವ ಸುತ್ತೋಲೆ ಸಂಖ್ಯೆ ಕಂಇ 20/ಎಂಎಲ್‌ಡಿ/2000 ರ ಅನ್ವಯ ಒಂದು ಸಂಸ್ಥೆಗೆ ಜೀರ್ಣೋದ್ಧಾರ / ರಿಪೇರಿಗಾಗಿ ಕನಿಷ್ಟ ರೂ 3 00 ಲಕ್ಷದವರೆಗೆ ಅನುದಾನ ಮಂಜುರು ಮಾಡಲು ಅವಕಾಶ ಕಲ್ಪಿಸಲಾಗಿದೆ ಸರ್ಕಾರದಿಂದ ಮಂಜೂರಾದ ಅನುದಾನವನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ಬಿಡುಗಡೆಗೊಳಿಸುವುದಕ್ಕೆ ಸಮಬಂಧಿಸಿದಂತೆ ಸರ್ಕಾರವು ದಿ 4–9–2001 ರಂದು ಹೊರಡಿಸಿರುವ ಸುತ್ತೋಲೆ ಸಂಖ್ಯೆ ಕಂಇ 59/ ಮುಅಬಿ/2001ರಲ್ಲಿ

ಮಾರ್ಗಸೂಚಿಯನ್ನು ನೀಡಿದ್ದು, ಅನುದಾನ ಬಿಡುಗಡೆಗೆ ಸಂಬಂಧಿಸಿದಂತೆ, ಈ ಕೆಳಕಂಡ ನಿಯಮಗಳನ್ನು ಪಾಲಿಸಲು ನಿರ್ದೇಶಿಸಿರುತ್ತದೆ

1 ಅನುದಾನ ಮಂಜೂರಾದ ಸಂಸ್ಥೆಗಳು ಉದ್ದೇಶಿತ ಕಾಮಗಾರಿಗೆ ಸಂಬಂಧಿಸಿದಂತೆ ಅಂದಾಜುಪಟ್ಟಿ ಮತ್ತು ನಕ್ಷೆಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರಿಗಳಿಂದ ತಾಂತ್ರಿಕ ಅನುಮೋದನೆ / ಆಡಳಿತಾತ್ಮಕ ಮಂಜೂರಾತಿಗಳನ್ನು ಪಡೆಯಬೇಕಾಗುತ್ತದೆ

2 ಮಂಜೂರಾದ ಅನುದಾನದಲ್ಲಿ ಅಂದಾಜುಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ದೊರಕಿದ ನಂತರ ಮಂಜೂರಾದ ಅನುದಾನದಲ್ಲಿ ಶೇ 50 ರಷ್ಟು ಮೊತ್ತವನ್ನು ಮೊದಲನೆ ಕಂತಾಗಿ ಸಂಸ್ಥೆಗೆ ಬಿಡುಗಡೆ ಮಾಡಲಾಗುವುದು ಪ್ರಥಮ ಕಂತಿನಲ್ಲಿ ಬಿಡುಗಡೆಯಾದ ಮೊತ್ತವನ್ನು ಸಂಬಂಧಪಟ್ಟ ಸಂಸ್ಥೆಗಳು ಉದ್ದೇಶಿತ ಕಾಮಗಾರಿಗಳಿಗೆ ಖರ್ಚು ಮಾಡಿರುವ ಬಗ್ಗೆ ಲೋಕೋಪಯೋಗಿ ಇಲಾಖೆ ಅಥವಾ ಜಿಲ್ಲಾ ಪಂಚಾಯತ್ ಅಭಿಯಂತರರು ಪರಿವೀಕ್ಷಣೆ ಮಾಡಿ, ಅವರ ಅನುಮೋದನೆಯೊಂದಿಗೆ ಮೊದಲನೆ ಕಂತಿನ ಬಳಕೆ ಪತ್ರವನ್ನು ಸಲ್ಲಿಸಿದ ನಂತರ, ಉಳಿದ ಅರ್ಧ ಅನುದಾವನ್ನು ಬಿಡುಗಡೆ ಮಾಡಲಾಗುವುದು

3 ಸರ್ಕಾರದಿಂದ ಮಂಜೂರಾದ ಅನುದಾನವನ್ನು ಹೊರತುಪಡಿಸಿ ಅಂದಾಜು ಪಟ್ಟಿಯ ಉಳಿಕೆ ವೆಚ್ಚವನ್ನು ಸಂಬಂಧಪಟ್ಟ ಸಂಸ್ಥೆಗಳು ಸಾರ್ವಜನಿಕ ವಂತಿಗೆಯಿಂದ ಭರಿಸಿ ಕಾಮಗಾರಿಯನ್ನು ಪೂರೈಸಬೇಕು ಸರ್ಕಾರದ ಅನುದಾನ ಹಾಗೂ ಸಾರ್ವಜನಿಕ ವಂತಿಗೆ ಹಣ ಕುರಿತಂತೆ ಸೂಕ್ತ ಲೆಕ್ಕ ಪತ್ರಗಳನ್ನು ನಿರ್ವಹಿಸಿ, ಲೆಕ್ಕ ಪರಿಶೋಧನೆಗೆ ಒಳಪಡಿಸಬೇಕು ಎರಡನೇ ಕಂತಿನ ಹಣವು ಪೂರ್ತಿ ಉಪಯೋಗವಾದ ನಂತರ ಸಕ್ಷಮ ಪ್ರಾಧಿಕಾರವು ಬಳಕೆ ಪ್ರಮಾಣ ಪತ್ರವನ್ನು ಆಯುಕ್ತರಿಗೆ ಸಲ್ಲಿಸುವುದು ಸರ್ಕಾರದಿಂದ ಅನುದಾನ ಮಂಜೂರಾಗಿರುವ ಪ್ರಕರಣಗಳಲ್ಲಿ ರೂ 5 00 ಲಕ್ಷಕ್ಕೂ ಮೀರಿದ ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ನಿಯಮಗಳನ್ನು ಪಾಲಿಸುವುದು ಸಾರ್ವಜನಿಕ ಸ್ಥಳಗಳಾದ ಸಿ ಎ ನಿವೇಶನ, ಸರ್ವೀಸ್ ರಸ್ತೆಗಳು, ಪಾರ್ಕುಗಳು ಹಾಗೂ ಇತರೆ ಸಾರ್ವಜನಿಕ ಉಪಯೋಗ ಪಡೆಯುವ ಸ್ಥಳಗಳಲ್ಲಿ ದೇವಸ್ಥಾನಗಳು ಇದ್ದಲ್ಲಿ ಅಂತಹವುಗಳಿಗೆ ಯಾವುದೇ ಅನುದಾವನ್ನು ಬಿಡುಗಡೆ ಮಾಡುವಂತಿಲ್ಲ ಸರ್ಕಾರದಿಂದ ಅನುದಾನವು ಬಿಡುಗಡೆಯಾದ ಒಂದು ವರ್ಷದೊಳಗೆ ಮಂಜೂರಾದ ಅನುದಾನವನ್ನು

ಸಂಬಂಧಪಟ್ಟ ಸಂಸ್ಥೆಗಳ ಉದ್ದೇಶಿತ ಕಾಮಗಾರಿಗಳಿಗೆ ಒಂದು ವರ್ಷದೊಳಗೆ ಬಳಸಿಕೊಂಡು ಬಳಕೆ ಪತ್ರಗಳನ್ನು ಸಲ್ಲಿಸಬೇಕಾಗುತ್ತದೆ ಒಂದು ವರ್ಷದೊಳಗೆ ಅನುದಾನವನ್ನು ಬಿಡುಗಡೆ ಮಾಡಿಸಿಕೊಳ್ಳಲು ಸಂಸ್ಥೆಗಳು ಕ್ರಮವಹಿಸದಿದ್ದಲ್ಲಿ, ಇತರೆ ಸಂಸ್ಥೆಗಳಿಗೆ ಮರುಹಂಚಿಕೆ ಮಾಡಲಾಗುವುದು

ಇ) 2006–2007ನೇ ಸಾಲಿನಲ್ಲಿ ಶಿಗ್ಗಾಂವ್–ಸವಣೂರು ತಾಲ್ಲೂಕುಗಳಲ್ಲಿಯ 9 ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಅನುದಾನ ಕೋರಿ ಬೇಡಿಕೆ ಬಂದಿರುತ್ತದೆ ಈ ಸಂಸ್ಥೆಗಳಿಗೆ ಪ್ರಸ್ತುತ ಸಾಲಿನಲ್ಲಿ ಅನುದಾನ ಮಂಜುರು ಮಾಡಲು ಪರಿಶೀಲಿಸಲಾಗುವುದು

ದೇವಸ್ಥಾನಗಳ ವಿವರ ಕೆಳಕಂಡಂತಿರುತ್ತದೆ

(1) ಶ್ರೀ ಗ್ರಾಮದೇವಿ (ದ್ಯಾಮವ್ವ) ಜೀರ್ಣೋದ್ಧಾರ ಟ್ರಸ್ಟ್ ಕಮಿಟಿ, ಕಲಿವಾಳ ಗ್ರಾಮ, ಸವಣೂರು ತಾಲ್ಲೂಕು

(2) ಶ್ರೀ ಬೀರೇಶ್ವರ ದೇವಸ್ಥಾನ ಅಗಡಿ ಗ್ರಾಮ, ಹಾವೇರಿ ತಾಲ್ಲೂಕು

(3) ಶ್ರೀ ಬಸವಣ್ಣ ದೇವರ ದೇವಾಲಯ, ಆಲದಕಟ್ಟೆ ಗ್ರಾಮ, ಹಿರೇಕೆರೂರು ತಾಲ್ಲೂಕು

(4) ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಹಿರೇಬೆಂಡಿಗೇರಿ ಗ್ರಾಮ, ಶಿಗ್ಗಾಂವ ತಾಲ್ಲೂಕು

(5) ಶ್ರೀ ಚೌಡೇಶ್ವರಿ ದೇವಿ ಹಾಗೂ ವೆಂಕಟೇಶ್ವರ ದೇವಾಲಯ ಟ್ರಸ್ಟ್ ಕಮಿಟಿ (ರಿ)

(6) ಶ್ರೀ ಸೇವಾಲಾಲ ದೇವಸ್ಥಾನ, ಹತ್ತಿ ಮತ್ತೂರ ತಾಮಡಾ, ಸವಣೂರು ತಾಲ್ಲೂಕು

(7) ಮುಕ್ತಿ ಧಾಮದಲ್ಲಿ ಶಿವಮಂದಿರ, ಬ್ಯಾಡಗಿ ನಗರ, ಬ್ಯಾಡಗಿ ತಾಲ್ಲೂಕು

(8) ಶ್ರೀ ಬಸವಣ್ಣ ದೇವಸ್ಥಾನ, ಬಸವನಾಳ ಗ್ರಾಮ, ಶಿಗ್ಗಾಂವ ತಾಲ್ಲೂಕು

(9) ಶ್ರೀ ಬೀರದೇವರ ದೇವಸ್ಥಾನ, ತಡಸ ಗ್ರಾಮ, ಶಿಗ್ಗಾಂವ ತಾಲ್ಲೂಕು

ಈ) 2006–07ರ ಆರ್ಥಿಕ ವರ್ಷದ ಮುಕ್ತಾಯದ ಮುನ್ನ ಧಾರ್ಮಿಕ ಸಂಸ್ಥೆಗಳಿಗೆ ಅನುದಾನ ಮಂಜೂರು ಮಾಡಲು ಪರಿಶೀಲಿಸಲಾಗುವುದು

155 (241) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಪ್ರಸಕ್ತ ವರ್ಷದಲ್ಲಿ ಒಣಮೆಣಸಿನಕಾಯಿ ಬೆಳೆ ಅತ್ಯುತ್ತಮವಾಗಿ ಬಂದಿದ್ದು, ಬೆಳೆಗೆ ಸರಿಯಾದ ಬಎಲೆ ದೊರಕದೇ ರೈತರು ಕಂಗಾಲಾಗಿರುವುದನ್ನು ಗಂಭೀರವಾಗಿ ಪರಿಗಣಿಸಿ, ಬೆಂಬಲ ಬೆಲೆ ಘೋಷಿಸುವುದು ಸರ್ಕಾರದ ಗಮನದಲ್ಲಿದೆಯೇ ,

ಆ) ಉತ್ತರ ಕರ್ನಾಟಕದಲ್ಲಿ ನಿರ್ಯಾ ಮಾಡುವಂತಹ ಒಣಮೆಣಸಿನಕಾಯಿ ಬೆಳೆಯುತ್ತಿದ್ದು, ಉತ್ತರ ಬೆಲೆ ಸಿಗುತ್ತಿಲ್ಲದಿರುವುದು ಸರ್ಕಾರಕ್ಕೆ ತಿಳಿದಿದೆಯೇ ,

ಇ) ಆಂಧ್ರಪ್ರದೇಶದ ಮಾದರಿಯಲ್ಲಿ ಸರ್ಕಾರವು ಬೆಂಬಲ ಬೆಲೆ ನಿಗಧಿಪಡಿಸಿದಲ್ಲಿ ಕೇಂದ್ರ ಸರ್ಕಾರದಿಂದ ಅರ್ಧದಷ್ಟು ವೆಚ್ಚವನ್ನು ಭರಿಸಲು ವ್ಯವಸ್ಥೆಯಿರುವುದು ಸರ್ಕಾರಕ್ಕೆ ತಿಳಿದಿದೆಯೇ ,

ಈ) ಹಾಗಿದ್ದಲ್ಲಿ, ಜರೂರಾಗಿ ಕೇಂದ್ರ ಸರ್ಕಾರದಿಂದ ಹೆಚ್ಚಿನ ಮಾಹಿತಿ ಪಡೆದು ಒನಮೆಣಸಿನಕಾಯಿಗೆ ಬೆಂಬಲ ಬೆಲೆ ಘೋಷಿಸಲು ಯಾವಾಗ ಕ್ರಮ ಕೈಗೊಳ್ಳುವುದು ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)

ಅ) ಒಣಮೆಣಸಿನಕಾಯಿಯು ಹಾಳಾಗದಂತಹ ವಾಣಿಜ್ಯ ಬೆಳೆಯಾಗಿರುವುದು ಒಣಮೆಣಸಿನಕಾಯಿ ಬೆಲೆ ಕುಸಿತದಲ್ಲಿ ರೈತರಿಗೆ ಮಾರುಕಟ್ಟೆ ಪ್ರಾಂಗಣಗಳಲ್ಲಿ ಸಂಗ್ರಹಣಾ ಸೌಲಭ್ಯಗಳನ್ನು ಒದಗಿಸಲಾಗುತ್ತದೆ ಮತ್ತು ಒತ್ತೆ ಯೋಜನೆಯಡಿಯಲ್ಲಿ ಮೃದುಸಾಲವನ್ನು ಒದಗಿಸಲಾಗುವುದು

ಆ) ಪ್ರಸ್ತುತದಲ್ಲಿ ಒಣಮೆಣಸಿಕಾಯಿಗೆ ರೈತರು ಪಡೆಯುತ್ತಿರುವ ಬೆಳೆಗಳು ಸಮಾಧಾನಕರವಾಗಿವೆ

ಇ) ಹೌದು

ಈ) (ಎ) ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ